**ಓ.ಎಸ್. ನಂಃ 128/2023**

**ಪಿ.ಡಬ್ಲ್ಯೂಃ 1**

**ದಿನಾಂಕ 17.01.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಯ ಪರಃ ಶ್ರೀ ಹೆಚ್.ಕೆ.ಹೆಚ್ ವಕೀಲರಿಂದಃ**

1. ನಾನು ಐ.ಟಿ.ಐ ಪದವೀಧರನಾಗಿರುತ್ತೇನೆ. 1 ನೇ ವಾದಿಯು ನನ್ನ ತಂದೆಯಾಗಿದ್ದು, ನನ್ನ ತಂದೆಯ ತಂದೆ ಅಂದರೆ ನನ್ನ ತಾತನ ಹೆಸರು ಬಸವಯ್ಯ ಅಂತ ಇರುತ್ತದೆ. ನನ್ನ ತಾತನಾದ ಬಸವಯ್ಯರವರಿಗೆ ಒಟ್ಟು 2 ಜನ ಮಕ್ಕಳು. ಅವರ ಹೆಸರು 1 ನೇ ವಾದಿಯಾದ ನಿಂಗಪ್ಪ ಮತ್ತು 5 ನೇ ವಾದಿಯ ತಂದೆಯಾದ ಮಾದಪ್ಪ ಅಂತ ಇರುತ್ತದೆ. ನನ್ನ ತಾತನಾದ ಬಸವಯ್ಯರವರಿಗೆ ಹೆಣ್ಣು ಮಕ್ಕಳು ಇರಲಿಲ್ಲ. ನನ್ನ ತಾತನಾದ ಬಸವಯ್ಯ ರವರಿಗೆ ಹೆಣ್ಣುಮಕ್ಕಳಿದ್ದರೂ ಸಹ ಅವರನ್ನು ನಾವು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

2. 5 ನೇ ವಾದಿಯ ತಂದೆಯಾದ ಮತ್ತು 1 ನೇ ವಾದಿಯ ಸಹೋದರನಾದ ಮಾದಪ್ಪ ಜೀವಂತವಾಗಿದ್ದಾರೆ ಎಂದರೆ ಸರಿ. ಸದರಿ ಮಾದಪ್ಪರವರನ್ನು ನಾವು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. 5 ನೇ ವಾದಿಯ ತಂದೆಯಾದ ಮಾದಪ್ಪರವರಿಗೆ ಒಟ್ಟು 4 ಜನ ಮಕ್ಕಳು ಹಾಗೂ ಅವರ ಹೆಸರು 5 ನೇ ವಾದಿಯಾದ ಚಂದ್ರಪ್ಪ, ವೀಣಾ, ವಸಂತ ಮತ್ತು ಕುಸುಮ ಅಂತ ಇರುತ್ತದೆ. ಮಾದಪ್ಪ ಬಿನ್ ಬಸವಯ್ಯರವರ 3 ಜನ ಹೆಣ್ಣುಮಕ್ಕಳನ್ನು ನಾವು ಈ ದಾವೆಯಲ್ಲಿ ನಾವು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ.

3. ನನ್ನ ತಂದೆಯಾದ 1 ನೇ ವಾದಿಗೆ ನಾವು ಒಟ್ಟು 8 ಜನ ಮಕ್ಕಳಿರುತ್ತೇವೆ. ಅವರ ಹೆಸರು ಜಯಪ್ಪ, 2 ನೇ ವಾದಿಯಾದ ನಾಗೇಶ, 3 ನೇ ವಾದಿಯಾದ ಮಹದೇವ, 4 ನೇ ವಾದಿಯಾದ ವೀರುಪಾಕ್ಷ, ಕಾಂತಮ್ಮ, ನೇತ್ರಮ್ಮ, ಮತ್ತು ಕುಸುಮ ಅಂತ ಇದ್ದು, ಅವರ ಪೈಕಿ ಜಯಪ್ಪ ಮತ್ತು ಕುಸುಮಾ ರವರು ಮರಣ ಹೊಂದಿರುತ್ತಾರೆ. ಜಯಪ್ಪರವರ ಹೆಂಡತಿ ಮತ್ತು ಮಕ್ಕಳನ್ನು ಹಾಗೂ ಕುಸುಮಾ ರವರ ಗಂಡ ಮತ್ತು ಮಕ್ಕಳನ್ನು ನಾವು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ.

4.ನನ್ನ ತಾತನಾದ ಬಸವಯ್ಯರವರ ಮರಣದ ನಂತರ ದಾವಾ ಆಸ್ತಿಯನ್ನು ನಮ್ಮ ಹೆಸರಿಗೆ ಪೌತಿ ಖಾತೆ ಮಾಡಿಸಲು ಅರ್ಜಿ ಕೊಡಲು ಹೋದಾಗ ಕ್ರಯಪತ್ರದ ಪ್ರಕಾರ ನನ್ನ ತಾತನಾದ ಬಸವಯ್ಯರವರ ಹೆಸರಿಗೆ ಖಾತೆ ಆಗದಿರುವುದು ನಮಗೆ ಗೊತ್ತಾಗಿರುತ್ತದೆ. ನನ್ನ ತಾತನಾದ ಬಸವಯ್ಯರವರು ಮರಣ ಹೊಂದಿ ಎಷ್ಟು ವರ್ಷಗಳಾಗಿವೆ ಎಂದು ನನಗೆ ಗೊತ್ತಿಲ್ಲ ಆದರೆ ಬಸವಯ್ಯರವರು ಮರಣ ಹೊಂದಿ 10 ವರ್ಷಗಳು ಮೇಲ್ಪಟ್ಟಿರಬಹುದು. ನನ್ನ ತಾತನ ಹೆಸರಿನಿಂದ ದಾವಾ ಆಸ್ತಿಯನ್ನು ನಮ್ಮ ಹೆಸರಿಗೆ ಪೌತಿ ಖಾತೆ ಮಾಡಲು ಅರ್ಜಿಯನ್ನು ನಾವು ಸುಮಾರು 8 ವರ್ಷಗಳ ಹಿಂದೆ ಕೊಟ್ಟಿರುತ್ತೇವೆ. ನನ್ನ ತಾತನಾದ ಬಸವಯ್ಯರವರ ಮರಣ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ.

**ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**